ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಮುಖ್ಯಮಂತ್ರಿಯವರೆ ಕ್ಷಮೆಯನ್ನು ಕೇಳಿದ ಮೇಲೆ ಮುಗಿಯಿತು, ಈಗ ತಾವು ಓದಿ.

5. ಕರ್ನಾಟಕ ರಾಜ್ಯ ಹಣಕಾಸಿನ ಶ್ವೇತ ಪತ್ರ ಮಂಡನೆ

ಅಧ್ಯಕ್ಷರೆ ಈಗ ಸದನದ ಮುಂದೆ ನಾನು ಶ್ವೇತ ಪತ್ರವನ್ನು ಮಂಡಿಸುತ್ತಿದ್ದೇನೆ. ಅನುಬಂಧ(1)

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೆ, ನಿನ್ನೆ ಮಾನ್ಯ ಮುಖ್ಯಮಂತ್ರಿಯವರು ಸಭೆಯಲ್ಲಿ ಇರಲಿಲ್ಲ. ಆ ಸಂದರ್ಭದಲ್ಲಿ ಮಾನ್ಯ ಶಂಕರಲಿಂಗೇಗೌಡರು ಹಾಗೂ ನಾವು ಮುಖ್ಯವಾದಂತಹ ವಿಚಾರವನ್ನು ತಮ್ಮ ಮುಂದೆ ಇಟ್ಟಿದ್ದೆವು. ಸಭೆಗೆ ಮಾನ್ಯ ಮುಖ್ಯಮಂತ್ರಿಯವರು ಬಂದಾಗ ವಿಷಯವನ್ನು ಮಂಡನೆ ಮಾಡುತ್ತೇವೆಂದು ಹೇಳಿದ್ದೀರಿ. ನಾವು ಪ್ರಸ್ತಾಪ ಮಾಡಿದಂತಹ ವಿಚಾರ ಈಗ ನಾಳೆ ಯಿಂದಲೇ ಅದು ಜಾರಿಗೆ ಬರುವ ದೃಷ್ಟಿಯಿಂದ ತಮ್ಮ ಅಪ್ಪಣೆಯನ್ನು ಕೋರಿ ಪ್ರಸ್ತಾಪ ಮಾಡುತ್ತೇವೆ. ತಾವು ಬೆಂಗಳೂರು ಮಹಾನಗರದಲ್ಲಿ ಕಂದಾಯದ ಪರಿಷ್ಕರಣೆಗೋಸ್ಕರ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಅನ್ನು ತಾವು ಮಾಡಿದ್ದೀರಿ. ಇದನ್ನು ನಾವು ಸ್ವಾಗತ ಮಾಡುತ್ತೇವೆ, ಇದಕ್ಕೆ ಇದ್ದಂತಹ ವ್ಯವಸ್ಥೆಯನ್ನು ಜುಲೈನಲ್ಲಿರುವಂತಹ ವ್ಯವಸ್ಥೆ ರಾಜ್ಯದಲ್ಲಿ ಮೊದಲ ಬಾರಿಗೆ ಜಾರಿಗೆ ತಂದಿದ್ದಿರಿ. ಇದನ್ನು ಮೈಸೂರು ನಗರಕ್ಕೂ ಅನ್ವಯವಾಗುವಂತೆ ಮಾಡಿದ್ದೀರಿ. ಅಲ್ಲಿ ಈಗ 1ನೇ ತಾರೀಖಿನಿಂದ ಜಾರಿಗೆ ಕೊಡಿ ಎಂದು ಆದೇಶವನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ಪುಸ್ತಕವನ್ನು ಅಚ್ಚು ಮಾಡಿದ್ದಾರೆ, ಇದು ಅಚ್ಚು ಮಾಡಿದ ನಂತರ ಮೊನ್ನೆ ಮತ್ತೊಂದು ಪ್ರಕಟಣೆಯನ್ನು ಹೊರಡಿಸಿದ್ದಿರಿ. ಇದರಲ್ಲಿ ಕಮರ್ಷಿಯಲ್‌ಗೆ ಶೇ.20 ರಷ್ಟು ಕಡಿಮೆಮಾಡಿದ್ದೀರಿ, ಡೊಮೆಸ್ಟಿಕ್‌ಗೆ ಶೇ.25ರಷ್ಟು ಕಡಿಮೆ ಮಾಡಿದ್ದೀರಿ ಹಿಂದಿನ ಪದ್ದತಿ ಏ ನಿ ತ್ತು, ಅದೇ ಪದ್ದತಿ ಜಾರಿಗೆ ಬರುತ್ತದೆ. ಈಗ ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ನೂರು ರೂಪಾ ಯಿಗಳನ್ನು ಕೊಟ್ಟು ಅದನ್ನು ಕೊಡಬಹುದೆನ್ನುವುದನ್ನು ಮಾತ್ರ ತಾವು ಕೊಟ್ಟಿದ್ದೀರಿ. ಇದನ್ನು ತಾವು 1ನೇ ತಾರೀಖಿನಿಂದ ಎಂದರೆ ನಾಳೆಯಿಂದಲೇ ಹಿಂದೆ ಏನು ಪದ್ದತಿ ಇತ್ತೋ ಅದೇ ಬರುತ್ತಿದೆ. ಅಲ್ಲಿ ಯಾರಾದರೂ ಹಣವನ್ನು ಕಟ್ಟದೆ ಹೋದರೆ ಆಸ್ತಿಯನ್ನು ಜಪ್ತಿ ಮಾಡುತ್ತೇವೆಂದು ಪ್ರಕಟಣೆಯನ್ನು ಕೊಟ್ಟಿದ್ದಾರೆ. ಆದುದರಿಂದ, ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಈಗ ತಾವು ಕೊಟ್ಟಿರುವಂತಹ ವ್ಯವಸ್ಥೆ ಜಾರಿಗೆ ಬಂದು ನಾಳೆ ಪುಸ್ತಕಗಳನ್ನು ತೆಗೆದುಕೊಂಡು ಅವರು ಎಲ್ಲರೂ ಅಸೆಸ್‌ಮೆಂಟ್ ಕೊಟ್ಟ ನಂತರದಲ್ಲಿ ತಾವು ಯಾವ ಪದ್ದತಿಯನ್ನು ಕೊಟ್ಟಿದ್ದಿರೋ ಅದಕ್ಕೆ ನಾವು ಬದ್ದರಾಗಿರುತ್ತೇವೆ. ಆದರೆ ಹಳೆಯ ಪದ್ದತಿಗೆ ತಾವು ಸರ್ಕಾರದಿಂದ ಒಂದು ತಡೆಯಾಜ್ಞೆಯನ್ನು ಕೊಡಬೇಕೆಂದು ಕೋರುತ್ತೇವೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ ತೆರಿಗೆ ಇರುವಂಥಾದ್ದು ಜನಸಾಮಾನ್ಯರಿಗೆ ಬಂಡೆ ರೀತಿಯಲ್ಲಿ ಏರಿದ್ದಾರೆ. ಅವರು ಬಾಡಿಗೆ ಕೊಟ್ಟು ಮನೆಯಲ್ಲಿ ವಾಸಮಾಡುವಂತಹ ರೀತಿಯಲ್ಲಿ ಈ ತೆರಿಗೆ ಮೌಲ್ಯ ಏರಿರುವಂಥದ್ದು ಆಗಿದೆ, ಈ ತೆರಿಗೆ ಮೌಲ್ಯ ಅವೈಜ್ಞಾನಿಕವಾಗಿ ಇದೆ. ನೀತಿ ನಿಯಮಗಳನ್ನು ಉಲ್ಲಂಘನೆ ಮಾಡಿದ್ದಾರೆ. ಈ ಜನರಿಗೆ ಏನಾಗಿದೆ ಎಂದರೆ ಮೈಸೂರು ನಗರದಲ್ಲಿ ಬದುಕುವುದೇ ಕಷ್ಟವೆನ್ನುವ ಭಾವನೆಯಾಗಿದೆ. ಅವರಿಗೆ ನೀರಿಗೆ ತೆರಿಗೆ, ಮನೆಗೆ ತೆರಿಗೆ ಕಟ್ಟುವ ಮುಖಾಂತರ ನಾವೆಲ್ಲರೂ ಭಸ್ಮವಾಗುತ್ತಿದ್ದೆವೆನ್ನುವಂತಹ ಭಾವನೆ ಹೆಚ್ಚಾಗಿರುವಂತಹ ಸಂದರ್ಭದಲ್ಲಿ ನೀವು ಮಧ್ಯೆ ಪ್ರವೇಶ ಮಾಡಿ ಒಂದು ಸದನ ಸಮಿತಿಯನ್ನು ಮಾಡಿ ವೈಜ್ಞಾನಿಕವಾದಂತಹ ರೀತಿಯಲ್ಲಿ ಮಾಡಬೇಕು. ದಯಮಾಡಿ ನಾಳೆಯಿಂದ ಜಾರಿಗೆ ಬರುವ ಈ ತೆರಿಗೆಯನ್ನು ತಡೆಹಿಡಿದು ಈ ಸದನದ ಸಮಿತಿಯ

ಮೂಲಕವೇ ಆಗಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ಮೈಸೂರಿನ ಜನರು ನೆಮ್ಮದಿಯಿಂದ ಉಸಿರು ಬಿಡಲುತಾವು ಕಾರಣಭೂತರಾಗಬೇಕೆಂದು ನಾವು ನಿಮಗೆ ಕೈಮುಗಿದು ಕೇಳಿಕೊಳ್ಳುತ್ತೇವೆ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೆ, ಅದರ ಪೂರ್ವಾಪರ ವಿಚಾರವೆಲ್ಲವನ್ನು ಸಂಗ್ರಹ ಮಾಡಿ ಅನಂತರ ನಾನು ಅದಕ್ಕೆ ಉತ್ತರವನ್ನು ಹೇಳಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಏನು ಹೇಳುತ್ತಿದ್ದಾರೆಂದರೆ ಮೈಸೂರು ನಗರದಲ್ಲಿ ನಾಳೆಯಿಂದಲೇ ಜಾರಿಗೆ ಬರುತ್ತಿದೆ. ಇದರಿಂದ ಅಲ್ಲಿ ಜನರಿಗೆ ತೊಂದರೆಯಾಗುತ್ತದೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ತಾವು ಕೂಲಂಕುಷವಾಗಿ ವಿಚಾರ ಮಾಡಿ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು: ಈಗ ತೊಂದರೆ ಏನು ಇಲ್ಲ, ಅದಕ್ಕೆ ಬೇಕಾದಷ್ಟು ಸಮಯವಿದೆ. ಇನ್ನು ಎರಡು ಮೂರು ದಿವಸಗಳಿವೆ.

ಶ್ರೀ ಜಗದೀಶ್ ಶೆಟ್ಟರ್ : ಮೈಸೂರು ನಗರದಲ್ಲಿ ನಾಳೆಯಿಂದಲೇ ಇಂಪ್ಲಿಮೆಂಟ್ ಮಾಡುತ್ತಿದ್ದಾರೆ; ಸೆಲ್ಫ್ ಅಸೆಸ್‌ಮೆಂಟ್ ಇಲ್ಲದಿದ್ದರೆ ಬೇರೆ ರೆವಿನ್ಯೂ ಅಥಾರಿಟೀಸ್ ಮಾಡಬಹುದಲ್ಲಾ, ಇಲ್ಲಿ ಎರಡು ಆಫರ್ಸ್ ಇದೆ.

(ಗೊಂದಲ)

ಶ್ರೀ ವಿ.ಸೋಮಣ್ಣ: ಮಾನ್ಯ ಅಧ್ಯಕ್ಷರೇ, ಕೆಲವು ವಸತಿಯ ದರಗಳು, ಮತ್ತೆ ಕೆಲವು ಕಡೆ ಕಮರ್ಷಿಯಲ್ ಜಾಗಗಳನ್ನು ಬೆಂಗಳೂರಿನಲ್ಲಿ ಮಾಡಬೇಕಾದರೆ ಸುಮಾರು ಮೂರ್ನಾಲ್ಕು ತಿಂಗಳುಗಳು ಸನ್ಮಾನ್ಯ ಮುಖ್ಯಮಂತ್ರಿಯವರು ಕಾಳಜಿಯನ್ನು ಪಡೆದು ಮಾಡಿರುವಂಥಾದ್ದು. ಮೈಸೂರು ನಗರದಲ್ಲಿ ಸೆಲ್ಫ್ ಅಸೆಸ್‌ಮೆಂಟ್ ಮಾಡುವಾಗ ಯಾವ್ಯಾವ ರೋಡಿಗೆ ಎಷ್ಟು ಆದ್ಯತೆಯನ್ನು ಕೊಡಬೇಕು, ಯಾವ್ಯಾವ ಭಾಗಗಳನ್ನು ಯಾವ ರೀತಿಯಲ್ಲಿ ವಿಂಗಡಣೆ ಮಾಡಬೇಕು ಅವೆಲ್ಲವನ್ನು ಮಾಡಿದ ಮೇಲೆ ಸೆಲ್ಫ್ ಅಸೆಸ್‌ಮೆಂಟ್ ಮಾಡಬಹುದು. ಆದರೆ ರ‍್ಯಾಂಡಮ್ ಆಗಿ ಒಂದೇ ರೀತಿಯಲ್ಲಿ ಮಾಡುವುಂಥಾದ್ದಕ್ಕೆ ಆಗುವುದಿಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಯವರು ಬೆಂಗಳೂರು ನಗರದಲ್ಲಿ ನಾಲ್ಕೈದು ತಿಂಗಳುಗಳು ಅಧಿಕಾರಿಗಳ ಜೊತೆಯಲ್ಲಿ ಕುಳಿತು ಮಾಡಿದ್ದಾರೆ. ಮೈಸೂರು ನಗರದಲ್ಲಿ ಹಾಗೂ ಇನ್ನಿತರ ನಗರಗಳಿಗೂ ಮಾಡುವಾಗ ನಗರದ ಯಾವ್ಯಾವ ಭಾಗಗಳಲ್ಲಿ ಯಾವ್ಯಾವ ರೀತಿಯ ರೇಟ್ ಫಿಕ್ಸ್ ಆಗಿರುತ್ತದೆ. ಅಲ್ಲಿರುವಂತಹ ದರಗಳು ಏನು ಇವೆಲ್ಲವನ್ನು ನಿಗಧಿಪಡಿಸಿ ಅದನ್ನು ಮಾಡಬೇಕಾಗಿರುವುದರಿಂದ ಸನ್ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದರು. ಇದನ್ನು ಸಡನ್ನಾಗಿ ಮಾಡುವಂಥಾದ್ದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಇದನ್ನು ಎಲ್ಲಾ ಮಾಡಿ ತದನಂತರ ಜಾರಿಗೆ ತಂದರೆ ಅದರಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ, ಇವರು ತೆರಿಗೆ ಎರಡೂ ನೂರು ರೂಪಾಯಿಗಳು ಇರುವುದನ್ನು ಎರಡು ಸಾವಿರ ರೂಪಾಯಿಗಳು ಮಾಡಿದ್ದಾರೆ.

ಶ್ರೀಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸರ್ಕಾರದಿಂದ ಏನಾದರೂ ಉತ್ತರ ಬರಲಿ, ಈಗ ನಮ್ಮ ಶಾಸಕರು ವಿಷಯವನ್ನು ಹೇಳಿದ್ದಾರೆ.

MR . SPEAKER : As for as my knowlege goes, there are two options. ಸೆಲ್ಫ್ ಅಸೆಸ್‌ಮೆಂಟ್ ಮಾಡಿಕೊಳ್ಳಬಹುದು, ಇಲ್ಲದಿದ್ದರೆ ರೆವಿನ್ಯೂ ಅಥಾರಿಟೀಸ್ ಕಡೆಯಿಂದಲೂ ಮಾಡಿಸಬಹುದು. ನೀವು They have introduced thescheme. ನೀವು ಯಾವುದಾದರೂ ಮಾಡಿಕೊಳ್ಳಬಹುದು.

ಶ್ರೀ ಜಗದೀಶ್ ಶೆಟ್ಟರ್ : ಇದನ್ನು ಯಾರಾದರು ಮಂತ್ರಿಗಳು ಹೇಳಲಿ.

ಶ್ರೀ ಎ. ರಾಮದಾಸ್ : ಅಲ್ಲಿನ ಶಾಲೆಯಿಂದ ಎರಡೂ ಜಾರಿಗೆ ಬರುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಅವರು ಏನು ಕೇಳುತ್ತಿದ್ದಾರೆಂದರೆ ಈ ಬಗ್ಗೆ ಮೈಸೂರು ನಗರದಿಂದ ಕೆಲವರು ನನ್ನೊಂದಿಗೆ ದೂರವಾಣಿ ಮೂಲಕ ಮಾತನಾಡಿದರು. There are so many anomalies. ಅದನ್ನು set right ಮಾಡಬೇಕೆಂದು ಹೇಳಿದರು. ನಾವು ಸಹ ಇದಕ್ಕೆ ತಕ್ಷಣ ಉತ್ತರವನ್ನು ನಿರೀಕ್ಷೆ ಮಾಡುವುದು ಸಾಧ್ಯವಿಲ್ಲ, ಮತ್ತು ಮಾನ್ಯ ಮುಖ್ಯಮಂತ್ರಿಯವರು ಸಹ ಇದರ ಬಗ್ಗೆ ಮಾತನಾಡುವುದಾಗಲಿಕ್ಕೆ ಕಷ್ಟವಾಗುತ್ತದೆ. ಇವರು ಮೂರು ದಿವಸಗಳ ಹಿಂದೆ ಪ್ರಶ್ನೆ ಎತ್ತಿದ್ದಾರೆ. ಮಾನ್ಯ ನಗರಾಭಿವೃದ್ಧಿ ಸಚಿವರು ಆದ ಮಾನ್ಯ ಚಿಮ್ಮನಕಟ್ಟಿಯವರು ಸಹ ನಿನ್ನೆ ಮಾತನಾಡುವಂಥ ಸಂದರ್ಭದಲ್ಲಿ ಇದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರವನ್ನು ಕೊಡುತ್ತಾರೆನ್ನುವಂತಹ ಮಾತನ್ನು ಹೇಳಿದರು. ಹೇಗಿದ್ದರೂ ಒಂದೆರಡು ದಿನಗಳಲ್ಲಿ ನಾವು ಮತ್ತೆ 10ನೇ ಏಪ್ರಿಲ್‌ನಂದು ಸೇರುತ್ತಿದ್ದೇವೆ. ಆದ್ದರಿಂದ ಇದನ್ನು 1ನೇ ಏಪ್ರಿಲ್‌ಗೆ ಜಾರಿಗೆ ಕೊಡುವ ಬದಲು 15ನೇ ಏಪ್ರಿಲ್‌ನಿಂದ ಜಾರಿಗೆ ತಂದರೆ ಏನೂ ತಪ್ಪಾಗುವುದಿಲ್ಲ. ಮಾನ್ಯ ಸದಸ್ಯರು ಈ ಪದ್ಧತಿಗೆ ವಿರೋಧವನ್ನೇನೂ ಮಾಡಿತ್ತಿಲ್ಲ. ಟ್ಯಾಕ್ಸ್ ಅನ್ನು ರ್ಯಾಷನಲೈಸೇಷನ್ ಮಾಡುವ ಯಾವುದನ್ನಾಗಲೀ ನಾವು ಅದನ್ನು ಸ್ವಾಗತ ಮಾಡಬೇಕು. ಸರ್ಕಾರ ಮಾಡುತ್ತಿರುವ ಒಳ್ಳೆಯ ಕೆಲಸವಾಗಿದೆ. ಆದರೆ ಮಾನ್ಯ ಸದಸ್ಯರನೇಕರು ಕೆಲವಾರು ಬಡ ಕುಟುಂಬಗಳಿಗೆ ತೊಂದರೆಯಾಗುವುದರಿಂದ ಅದನ್ನು ಬದಲಾಯಿಸಿ ಮಾನ್ಯ ಮುಖ್ಯಮಂತ್ರಿಗಳು 15 ದಿವಸ ಡೆಫರ್ ಮಾಡಬೇಕೆಂದು ಕೇಳುತ್ತಿದ್ದಾರೆ. ಆದರಲ್ಲಿ ತಪ್ಪೇನೂ ಇಲ್ಲ, ಆ ರೀತಿ ಮಾಡಬಹುದು ಎಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಅಲ್ಲಿ ಒಬ್ಬ ಬಡ ಕುಟುಂಬದವರು ವಿಷ ತೆಗೆದು ಕೊಳ್ಳುವುದಕ್ಕೆ ಹೊರಟಿದ್ದರು. ಅವರು ಸಾಲ ಮಾಡಿ ಒಲೆಯೊಂದನ್ನು ಕೊಂಡುಕೊಂಡಿದ್ದರು. ಸಾಲಕ್ಕೆ ಬಡ್ಡಿ ಕಟ್ಟುವುದಕ್ಕಾಗಿ ಅವರು ಒಲೆಯನ್ನೇ ಮಾರಬೇಕಾಯಿತು. ಈ ಕಡೆ ಒಲೆಯೂ ಹೋಯಿತು. ಆ ಕಡೆ ಸಾಲವೂ ತೀರಲಿಲ್ಲ. ಇಂತಹ ಪರಿಸ್ಥಿತಿಗಳು ಈಗ ಅಲ್ಲಿ ನಿರ್ಮಾಣವಾಗಿವೆ.

ಶ್ರೀ ವಿ.ಶ್ರೀನಿವಾಸಪ್ಪ : 200 ರೂಪಾಯಿಗಳು ಮನೆ ಬಾಡಿಗೆ ಬರುತ್ತಿದ್ದಾರೆ ಮನೆಯ ಒಡೆಯ ಆ ಮನೆಗೆ 2000 ಸಾವಿರ ರೂಪಾಯಿಗಳ ಕಂದಾಯ ಕಟ್ಟಬೇಕಾದಂತಹ ಪರಿಸ್ಥಿತಿ ಇದೆ. ಇದನ್ನು ಮಾಡಿ ಮಾನ್ಯ ಸಭಾನಾಯಕರು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ : ಇದನ್ನು 15 ದಿವಸ ತಡೆ ಹಿಡಿಯಿರಿ. ಅನಂತರ ವೈಜ್ಞಾನಿಕವಾಗಿ ತೆರಿಗೆ ನಿಗದಿಪಡಿಸಲು ಒಂದು ಸಮಿತಿಯನ್ನು ರಚನೆ ಮಾಡಿ.

ಶ್ರೀ ಎಸ್.ಎಂ.ಕೃಷ್ಣ : ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಕಂಪಲಸರಿ ಸ್ಕೀಮ್ ಏನು ಅಲ್ಲ. ಆ ಸ್ಕೀಮ್ ವ್ಯಾಪ್ತಿಯಲ್ಲಿ ಬರಬೇಕೋ ಬೇಡವೋ ಎಂಬ ಆಪ್ಷನ್ ಅವಕಾಶಗಳದ್ದೇ ಆಗಿರುತ್ತದೆ. ಇಲ್ಲಿ ಆ ಸ್ಕೀಮ್

ಅನ್ನು ಕಡ್ಡಾಯ ಮಾಡಿಲ್ಲದಿರುವುದರಿಂದ ಇಷ್ಟವಿಲ್ಲದವರು ಆ ಸ್ಕೀಮ್‌ನ ಆಶ್ರಯದಲ್ಲಿ ಬರ ಬೇಕಾಗಿಲ್ಲ. ಆದ್ದರಿಂದ ನೀವು ಈ ಹಿಂದಿನ ಪದ್ದತಿ ಏನಿತ್ತು ಅದರ ಪ್ರಕಾರ....

ಶ್ರೀ ಎ. ರಾಮದಾಸ್ : ಮಾನ್ಯ ಸಭಾ ನಾಯಕರು ದಯವಿಟ್ಟು ಆಲಿಸಬೇಕು. ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನಾಳೆಯಿಂದ ಜಾರಿಗೆ ಬರುತ್ತಿದೆ. ಈಗಾಗಲೇ ಆ ಸ್ಕೀಮ್ ಬಗೆಗಿನ ಪುಸ್ತಕಗಳು ಪ್ರಿಂಟ್ ಆಗಿವೆ. ಹಿಂದಿನ ಸರ್ಕಾರ 1999ರಲ್ಲಿ ಜಾರಿ ಮಾಡಿದ್ದಂತಹ ಸ್ಕೀಮ್ ಅನ್ನು ಅವೈಜ್ಞಾನಿಕವಾಗಿದೆ ಎಂದು ಅದಕ್ಕೆ ತಡೆಯಾಜ್ಞೆ ನೀಡಿತ್ತು. ಆ ಪದ್ದತಿಯನ್ನೂ ಕೂಡ ಈಗ ಜಾರಿಗೆ ಕೊಡಲಾಗುತ್ತಿದೆ. ನಾಳೆಯಿಂದ ಕಂಪಲ್‌ಸರಿ ಆ ಪದ್ದತಿಯಡಿ ಹಣವನ್ನು ಕೂಡ ಕಟ್ಟಬೇಕೆಂದು ಹೇಳುತ್ತಿದ್ದಾರೆ. ಈ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಕೂಡ ಜಾರಿಗೆ ತರುತ್ತಿದ್ದಾರೆ. ಆ ದೃಷ್ಟಿಯಿಂದ ಸರ್ಕಾರ ಕೊಟ್ಟಿರುವಂತಹ ಹೊಸ ಯೋಜನೆ ಜಾರಿಗೆ ಕೊಡುವವರೆಗಾದರೂ ಹಳೆಯ ಯೋಜನೆಯನ್ನು ನಿಲ್ಲಿಸಿ ಎಂದು ನಾವು ಕೇಳುತ್ತಿದ್ದೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಅದರ ಬಗ್ಗೆ ಒಂದು ಸದನದ ಸಮಿತಿಯನ್ನು ಮಾಡಿ. ಸದ್ಯಕ್ಕೆ ದಯಮಾಡಿ ಅದನ್ನು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಎಂ. ಕೃಷ್ಣ: ಇದನ್ನು 15ನೇ ತಾರೀಖಿನವರೆಗೆ ಮುಂದಕ್ಕೆ ಹಾಕುತ್ತಿದ್ದೇನೆ. ಈ ಮಧ್ಯೆ ಇದರ ಸಮಸ್ಯೆಗಳನ್ನು ಪರಿಹಾರ ಮಾಡೋಣ.

ಶ್ರೀ ಹಂಪನಗೌಡ ಬಾದರ್ಲಿ: ಸಿಂಧನೂರಿನಲ್ಲಿ ಕುಡಿಯುವ ನೀರಿನ ಯೋಜನೆ ಪೂರ್ಣ ಗೊಳಿಸುವ ಬಗ್ಗೆ ಈಗಾಗಲೇ ವ್ಯಾಪ್ತಿಯಲ್ಲಿ ನೀರು ಬಂದಿದ್ದರೂ ಕೂಡ ಅಲ್ಲಿ ಏನಾಗಿದೆ ಎಂದರೆ ಹಿಂದೆ ಅಂದಾಜು ಪತ್ರಿಕೆ ತಯಾರು ಮಾಡತಕ್ಕಂತಹ ಸಂದರ್ಭದಲ್ಲಿ ಕೊಪ್ಪಳ ವ್ಯಾಪ್ತಿಯಲ್ಲಿ ಈಗಿರುವ ಡಿಸ್ಟ್ರಿಬ್ಯೂಷನ್ ಲೈನ್ ಆ ಒಂದು ಯೋಜನೆಯಲ್ಲ ಸೇರಿರಲಿಲ್ಲ. ಈಗ ಅದಕ್ಕಾಗಿ 3 ಕೋಟಿ 50 ಲಕ್ಷ ರೂಪಾಯಿಗಳ ಅಂದಾಜು ತಯಾರು ಮಾಡಿದ್ದು ಅದು ಬೋರ್ಡ್ ಮುಂದೆ ಬಂದು ಬೋರ್ಡ್‌ನಿಂದ ಅಪ್ರೂವಲ್ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಸಚಿವ ಸಂಪುಟದ ಒಪ್ಪಿಗೆ ದೊರಕಿಸಿಕೊಡುತ್ತೇನೆ ಎಂದು ಹೇಳಿದ್ದರು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ತೀವ್ರಗತಿಯಿಂದ ಅದಕ್ಕೆ ಒಪ್ಪಿಗೆ ನೀಡಿ ಕೂಡಲೇ ಕೆಲಸ ಪ್ರಾರಂಭಿಸಿ ನಗರಕ್ಕೆ ನೀರನ್ನು ಒದಗಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

(6) ಅಧ್ಯಕ್ಷರ ಅಪ್ಪಣೆ ಮೇರೆಗೆ

ಬಿಜಾಪುರದ ಜಲಾನಯನ ಯೋಜನೆಯ ಬಗ್ಗೆ ಪ್ರಸ್ತಾಪ

ಶ್ರೀ ಎಸ್.ಕೆ. ಬೆಳ್ಳುಬ್ಬಿ (ಬಸವನಬಾಗೇವಾಡಿ) : ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಂತ್ರಿಕ ಇಲಾಖೆಯ ಮಂಜೂರಾತಿ ಪಡೆಯದೇ ಜಲಾನಯನ ಅಭಿವೃದ್ಧಿ ಯೋಜನೆಯಲ್ಲಿ ಸುಮಾರು 8 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎಂಬ ಸುದ್ದಿ ನಿನ್ನೆ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಬಂದಿದೆ. ಬಿಜಾಪುರ ಜಿಲ್ಲೆ ಮೊದಲೇ ಬರಗಾಲ ಪೀಡಿತ ಜಿಲ್ಲೆ. ಆಭೂಮಿಯಲ್ಲಿ ನೀರಿನ ಪ್ರಮಾಣ ಹೆಚ್ಚು ಮಾಡಬೇಕು, ಅರಣ್ಯವನ್ನು ಹೆಚ್ಚು ಮಾಡಬೇಕು, ಬೇಸಾಯಕ್ಕೆ ಉಪಯೋಗ ಇಲ್ಲದ ಭೂಮಿಯನ್ನು ಬೇಸಾಯಕ್ಕೆ ಅನುವು ಮಾಡಿಕೊಡಬೇಕು ಎಂಬ ಹಲವಾರು ಉದ್ದೇಶಗಳನ್ನಿಟ್ಟುಕೊಂಡು ಜಿಲ್ಲಾ ಪಂಚಾಯಿತಿ ಮುಖಾಂತರ ಈ 8 ಕೋಟಿ ರೂಪಾಯಿಗಳ ಯೋಜನೆಯನ್ನು ಮೂರು ಸ್ವಯಂಸೇವಾ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ. ಇಂಡಿ ತಾಲ್ಲೂಕಿನ ಭತಗುಣಕಿ